# ಸೂಪರ್ ಮಾಮ್‌ಗೆ ಹುಡುಕಾಟ ಆರಂಭ

**ಬೆಂಗಳೂರು, ಏ.23-** ಮಂತ್ರಿ ಸ್ಕ್ವೇರ್ ತನ್ನ ನೂತನ ಬೆಂಗಳೂರು ಸೂಪರ್ ಮಾಮ್ ಪ್ರತಿಭಾನ್ವೇಷಣೆಗೆ ಚಾಲನೆ ನೀಡಿದ್ದು, ಈ ಮೂಲಕ ಬಹು ಹಂತದ ಕೆಲಸಗಳನ್ನು ನಿಭಾಯಿಸುವ ಮೂಲಕ ತಾಯ್ತನ ಮೆರೆಯುವ ಕಾರ್ಯವನ್ನು ಶ್ಲಾಘಿಸುವ ಕಾಲ ಮತ್ತೆ ಬಂದಿದೆ.

ಐದನೆ ಆವೃತ್ತಿಯು ಈ ವರ್ಷದ ಕಾರ್ಯಕ್ರಮದ ವೇದಿಕೆಯು ತಾಯಂದಿರ ಪ್ರತಿಭೆಯನ್ನು ಪ್ರದರ್ಶಿಸಲು ಹಾಗೂ ಕೆಲಸ ಮತ್ತು ಖಾಸಗಿ ಬದುಕಿನ ನಡುವೆ ಸಮತೋಲನ ಕಾಯ್ದುಕೊಳ್ಳುವ ಹಾಗೂ ತನ್ನ ಮಕ್ಕಳಿಗೆ ಬೆಂಬಲವಾಗಿ ನಿಲ್ಲುವ ಅವರ ಪರಿಣಾಮಕಾರಿ ಸೇವೆಯನ್ನು ಶ್ಲಾಘಿಸಲು ಒತ್ತು ನೀಡಲಿದೆ.

ಸ್ಪರ್ಧಿಗಳಿಗೆ ವಿವಿಧ ಕಾರ್ಯಾಗಾರಗಳು, ಲಿಖಿತ ಪರೀಕ್ಷೆ, ವ್ಯಕ್ತಿಗತ ಸಂದರ್ಶನ ನಡೆಯಲಿದ್ದು, ಬಳಿಕ ಸೆಮಿಫೈನಲ್ ಹಂತದ ಸುತ್ತು ಪ್ರವೇಶಿಸಲಿದ್ದಾರೆ.

ಅಲ್ಲಿ ಸೂಪರ್ ಮಾಮ್‌ಗಳಿಗೆ ಫ್ಯಾಷನ್ ಶೋ, ಫಿಟ್‌ನೆಸ್ ಮತ್ತು ಸೃಜನಶೀಲ ಮನೋಭಾವ ಕುರಿತ ಸುತ್ತು ಇರಲಿದೆ. ತದನಂತರ ಅಂತಿಮ ಪಟ್ಟಿಗೆ ತಲುಪುವ ಸ್ಪರ್ಧಿಗಳು ಪ್ರಶಸ್ತಿಗಾಗಿ ಸ್ಪರ್ಧೆ ನಡೆಸಲಿದ್ದಾರೆ.

ಕಾರ್ಯಕ್ರಮ ಕುರಿತು ಮಾತನಾಡಿದ ಮಾಲ್ ಮ್ಯಾನೇಜ್‌ಮೆಂಟ್ ಮುಖ್ಯಸ್ಥ ಮಾಜ್ದಾ ಮಾಶ್ ಫೆಜ್ ಇಂದು ಮಹಿಳೆಯರು ದೊಡ್ಡ ಆಶಾಭಾವನೆ ಹೊಂದಿದ್ದಾರೆ.

ಪ್ರತಿಯೊಂದನ್ನು ತಮ್ಮ ಮನಸ್ಥಿತಿಗೆ ಅನುಗುಣವಾಗಿ ಹೊಂದಿಸಿರುತ್ತಾರೆ. ನವಪೀಳಿಗೆಯ ತಾಯಂದಿರಿಗೆ ತಮ್ಮ ಬಹು ಹಂತದ ಕಾರ್ಯ ಶೈಲಿಯ ಪ್ರತಿಭೆಯನ್ನು ಪ್ರದರ್ಶಿಸುವ ಸಲುವಾಗಿಯೇ ಈ ಸೂಪರ್ ಮಾಮ್ ವೇದಿಕೆ ಇದೆ.

ಸಮಾಜಕ್ಕೆ ಮಹಿಳೆಯರ ಕೊಡುಗೆಯು ಎಂದಿಗೂ ಏಕರೂಪವಾಗಿ ಉಳಿಯಲಿದೆ. ಐದನೇ ಆವೃತ್ತಿಯಲ್ಲಿ ಹೆಚ್ಚಿನ ಜನರು ಭಾಗವಹಿಸುವ ಹಾಗೂ ಈ ಮೂಲಕ ತಾಯ್ತನದ ಸಂಭ್ರಮ ಅನುಭವಿಸುವ ಇನ್ನಷ್ಟು ಅವಕಾಶಗಳನ್ನು ಸೃಷ್ಟಿಸುವ ಉದ್ದೇಶವಿದೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಯಶಸ್ವಿ ಮಹಿಳೆಯರು ತೀರ್ಪುಗಾರರಾಗಿ ಭಾಗವಹಿಸಲಿದ್ದಾರೆ.

ತೀರ್ಪುಗಾರರಲ್ಲಿ ನಗರದ ಮಹಿಳಾ ಉದ್ಯಮಗಾರರಲ್ಲಿ ಹೆಸರು ಮಾಡಿರುವ ಸ್ನೇಹಲ್ ಮಂತ್ರಿ ಅವರು ಸೇರಿದ್ದಾರೆ.

ವಿಜೇತರಿಗೆ ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸ ಕಾರ್ಯಕ್ರಮಗಳು ಬಹುಮಾನವಾಗಿ ದಕ್ಕುತ್ತವೆ.

ನೋಂದಣಿಗಾಗಿ 9566400700 ಸಂಖ್ಯೆಗೆ ಕರೆ ಮಾಡಿ ಅಥವಾ ಇ-ಮೇಲ್ mantrisupermom5@gmail.com ವೆಬ್‌ಸೈಟ್ www.mantrisquare.cojm ಸಂಪರ್ಕಿಸಬಹುದು.